ವ್ಯವಸ್ಥೆ ಕಲ್ಪಿಸಲು ರೂ.20.30 ಕೋಟಿ ಅಂದಾಜು ಯೋಜನೆಗೆ ಅನುಮೋದನೆ ನೀಡಲಾಗಿದೆ. KUWSDB ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ವಂಡಮಾನ್ ಕೆರೆ ಜಲಮೂಲ ಆಧರಿಸಿ ಶುದ್ಧೀಕರಿಸಿದ ನೀರನ್ನು 62 ಸಮಸ್ಯಾತ್ಮಕ ಗ್ರಾಮಗಳಿಗೆ ಪೂರೈಕೆ ಮಾಡಲು ರೂ.9.92ಕೋಟಿ ಅಂದಾಜು ಯೋಜನೆಗೆ ಸಬ್-ಮಿಷನ್ ಕಾರ್ಯಕ್ರಮದಡಿ ಅನುಮೋದನೆ ನೀಡಲಾಗಿದೆ. ಇದಲ್ಲದೆ ಡಾ:ಡಿ.ಎಂ.ನಂಜುಂಡಪ್ಪ ವರದಿ ಆಧಾರಿತ ವಿಶೇಷ ಅಭಿವೃದ್ಧಿ ಯೋಜನೆಯಡಿ ಈ ಭಾಗದ ಇತರೆ 44 ಸಮಸ್ಯಾತ್ಮಕ ಗ್ರಾಮಗಳಿಗೆ ಪರ್ಯಾಯ ಜಲಮೂಲ ಆಧರಿಸಿ ಶಾಶ್ವತ ಯೋಜನೆಗಳನ್ನು ರೂಪಿಸಲು ಕ್ರಮವಹಿಸಲಾಗಿದೆ. ಜೊತೆಗೆ ಮೆ: BAIF ಸಂಸ್ಥೆ ಮುಖೇನ ಬಾಗೇಪಲ್ಲಿ ತಾಲ್ಲೂಕಿನ 15 ಅಧಿಕ ಫ್ಲೋರೈಡ್ ಬಾಧೆಗೊಳಗಾದ ಜನವಸತಿಗಳಿಗೆ ಸಂಬಂಧಿಸಿದಂತೆ ರೂ.3.59 ಕೋಟಿ ಅಂದಾಜಿನ ಪೈಲೆಟ್ ಯೋಜನೆ ಮಂಜೂರಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ : (181)329
ಸದಸ್ಯರ ಹೆಸರು : ಶ್ರೀ ಸಂಪಂಗಿ.ಎನ್ (ಬಾಗೇಪಲ್ಲಿ)
: (ಶ್ರೀ ಶೋಭಾ ಕರಂದ್ಲಾಜೆ)

ಅ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ರೈತಾಪಿ ವರ್ಗದ ಬಡ ಜನತೆಯು ಕುಡಿಯುವ ನೀರಿನ ಅನುಕೂಲತೆಯ ಸಲುವಾಗಿ ಚಿತ್ರಾವತಿ ಅಣೆಕಟ್ಟನ್ನು ನಿರ್ಮಾಣ ಮಾಡಿದ್ದು ನಿಜವಲ್ಲವೇ;

ಕುಡಿಯುವ ನೀರಿನ ಬಾಬ್ತಿಗಾಗಿ ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಡ್ಯಾಂ ನಿರ್ಮಾಣ ಮಾಡಲಾಗಿದೆ.

ಆ ಈ ಅಣೆಕಟ್ಟಿನಿಂದ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಲಾಗುತ್ತಿದೆ;

ಪರಗೋಡು ಜಲಾಶಯದ ವತಿಯಿಂದ ಬಾಗೇಪಲ್ಲಿ ತಾಲ್ಲೂಕಿನ 75 ಗ್ರಾಮಗಳು ಮತ್ತು ಗುಡಿಬಂಡೆ ತಾಲ್ಲೂಕಿನ 53 ಗ್ರಾಮಗಳು ಕುಡಿಯುವ ನೀರಿನ ಸೌಲಭ್ಯ ಪಡೆಯಲಿವೆ.

ಇ ಈ ಭಾಗದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜನರು ಫ್ಲೋರೈಡ್ ಅಂಶದ ನೀರನ್ನು ಕುಡಿದು ಕೈಕಾಲುಗಳು ಸ್ವಾಧೀನತೆಯನ್ನು ಕಳೆದು ಕೊಂಡು ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ ಭಾಗದ ಜನ ಅಧಿಕ ಫ್ಲೋರೈಡ್ ಅಂಶವಿರುವ ನೀರು ಸೇವನೆಯಿಂದ ಡೆಂಟಲ್ ಮತ್ತು ಸ್ಕೆಲೆಟನ್ ಫ್ಲೋರೊಸಿಸ್ ಖಾಯಿಲೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ ಚಿತ್ರಾವತಿ ಅಣೆಕಟ್ಟಿನಿಂದ ಶಾಶ್ವತ ಕುಡಿಯುವ ನೀರಿನ ಸೌಕರ್ಯವನ್ನು ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕಿನ ಜನತೆಗೆ ಕಲ್ಪಿಸಿಕೊಡುವ ದೃಷ್ಟಿಯಿಂದ ನಿರ್ಮಿಸಿದ್ದು, ಇದರ ಪ್ರಯೋಜನ ಯಾವ ಹಂತದಲ್ಲಿದೆ;

ಉ ಚಿತ್ರಾವತಿ ಅಣೆಕಟ್ಟಿನ ಸಂರಕ್ಷಣೆ ಹಾಗೂ ಈ ಭಾಗದ ಜನತೆಗೆ ಶಾಶ್ವತವಾಗಿ ಕುಡಿಯುವ ನೀರಿನ ಸಂಪರ್ಕಕ್ಕೆ ಹೆಚ್ಚು ಒತ್ತು ನೀಡಿ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಈ ಸಲುವಾಗಿ ರೂ.20.30 ಕೋಟಿ ಅಂದಾಜಿನ ಯೋಜನೆಯನ್ನು 128 ಸಮಸ್ಯಾತ್ಮಕ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಮಂಜೂರು ಮಾಡಲಾಗಿದ್ದು, ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕಾಗಿ KUWSDB ಟೆಂಡರ್ ಪ್ರಕಟಣೆ ಹೊರಡಿಸಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(421)330**
ಸದಸ್ಯರ ಹೆಸರು	:	**ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ**
ಉತ್ತರಿಸುವವರು	:	**ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್, ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು)**

ಅ) ರಾಜ್ಯದಲ್ಲಿನ ಗ್ರಾಮಗಳಿಗೆ ಕುಡಿಯುವ ನೀರಿನ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜಿಗೆ ಪ್ರತಿ ಯೂನಿಟಿಗೆ 3.90ರೂ. ವಿಧಿಸುತ್ತಿದ್ದು ಪ್ರತಿ ಗ್ರಾಮ ಪಂಚಾಯಿತಿಯು ಸರಾಸರಿ 25–30 ಸಾವಿರದಷ್ಟು ರೂ.ಗಳು ವಿದ್ಯುತ್ ಬಿಲ್ ಮತ್ತು ಕಂದಾಯದ ಬಿಲ್ಲುಗಳನ್ನು ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ರಾಜ್ಯದಲ್ಲಿನ ಗ್ರಾಮಗಳಿಗೆ ಕುಡಿಯುವ ನೀರಿನ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜಿಗೆ ಪ್ರತಿ ಗ್ರಾಮ ಪಂಚಾಯಿತಿಯು ಸರಾಸರಿ 25–30 ಸಾವಿರದಷ್ಟು ರೂ.ಗಳು ವಿದ್ಯುತ್ ಬಿಲ್ ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸರ್ಕಾರವು ಪ್ರತಿ ಗ್ರಾಮ ಪಂಚಾಯಿತಿಗಳಿಗೆ ವಾರ್ಷಿಕವಾಗಿ ರೂ.6.00 ಲಕ್ಷ ನೀಡುತ್ತಿದ್ದು, ಈ ಹಣವು ವಿದ್ಯುತ್ ಬಿಲ್ ಹಾಗೂ ನೀರಿನ ಪಂಪ್‌ಸೆಟ್ ವಿದ್ಯುತ್ ಬಿಲ್ಲುಗಳಿಗೆ ಹಾಗೂ ಕಂದಾಯಗಳಿಗೆ ವಿನಿಯೋಗವಾಗುತ್ತಿದ್ದು, ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;